# ಇಲ್ಲಿಯವರೆಗೆ



ಶ್ರೀದೇವಿಯ ತಂದೆ ಮತ್ತು ತಾಯಿಯ ನಡುವೆ ರಾಜಕೀಯ ಕಾರಣಗಳಿಗಾಗಿ ಮೂಡಿದ ವೈಮನಸ್ಸು ತೀವ್ರ ಸ್ವರೂಪ ಪಡೆದು, ದಾಂಪತ್ಯದಲ್ಲೂ ಬಿರುಕು ಮೂಡಿತು. ಶ್ರೀದೇವಿಗೆ ತನ್ನ ಗಂಡ ರಾಜಕೀಯ ಪ್ರವೇಶಿಸುವುದು ಸ್ವಲ್ಪವೂ ಇಷ್ಟವಿರಲಿಲ್ಲ. ಆದರೆ, ರಾಜಕೀಯದ ಒತ್ತಡ ಎಲ್ಲ ದಿಕ್ಕುಗಳಿಂದಲೂ ಅವನನ್ನು ಆಕ್ರಮಿಸತೊಡಗಿತು. ಒತ್ತಡ ಅತಿಯಾದಾಗ, ಅವನೊಳಗಿನ ಅಲೆಮಾರಿ ಮತ್ತೆ ಜಾಗೃತಗೊಂಡ. ಈ ಬಾರಿ ಕೇವಲ ಊರಷ್ಟೇ ಬದಲಾಗಲಿಲ್ಲ. ದೇಶವೇ ಬದಲಾಯಿತು. ಗಲ್ಫ್‌ನ ಅಪರಿಚಿತ ವಾತಾವರಣದಲ್ಲಿ ಬದುಕು ಗರಿಗೆದರತೊಡಗಿತು. ಆದರೆ, ಆ ಬದುಕಿನ ನೆಮ್ಮದಿ ಕೆಡಿಸುವಂತೆ ಎದುರಾದುದು ಯುದ್ಧದ ದಳ್ಳುರಿ.

ಎಷ್ಟೇ ಪ್ರಯತ್ನಿಸಿದರೂ ಸುಮಕ್ಕನಿಗೆ ಸೀಟು ಸಿಗಲಿಲ್ಲ. ಅಂಕಲ್‌ನ ಮೂಲಕ ಓಡಾಡಿದರೂ ಸಾಧ್ಯವಾಗಲಿಲ್ಲ. ಹೈಕಮಾಂಡ್ ಮಧ್ಯ ಪ್ರವೇಶಿಸಿ ಆ ಸೀಟನ್ನು ಯುವ ಜನ ಪ್ರತಿನಿಧಿಗೆ ಮೀಸಲಿರಿಸಿದರಂತೆ. ನನ್ನ ಹೆಸರನ್ನು ಏಕ ಕಂಠದಿಂದ ಅನುಮೋದಿಸಲ್ಪಟ್ಟಿತಂತೆ. ಆದರೆ ನಾನು ಎಲ್ಲಿದ್ದೆ? ನನ್ನನ್ನು ಪತ್ತೆ ಹಚ್ಚಲು ಸಾಧ್ಯವೇ? ಕೊನೆಗೆ ವಿದ್ಯಾರ್ಥಿ ನಾಯಕನೊಬ್ಬನನ್ನು ದಕ್ಷಿಣದಿಂದ ಆಮದು ಮಾಡಿಕೊಳ್ಳಬೇಕಾಯಿತಂತೆ. ಚಂದ್ರ ವಾರಿಯರ್ ಕೂಡ ಸ್ಥಾನವಂಚಿತರ ಸಾಲಿಗೆ ಸೇರಲ್ಪಟ್ಟರಂತೆ. ಅವನು ನಿರಂತರವಾಗಿ ಗೆಲ್ಲುತ್ತಿದ್ದ ಕ್ಷೇತ್ರದಲ್ಲಿ ಹೊಸದಾಗಿ ಬಂದ ಒಬ್ಬ ಮಹಿಳಾನಾಯಕಿ ಬಾವುಟ ಹಾರಿಸಿದರಂತೆ. ವಾರಿಯರ್ರ ಪ್ರತಾಪ ಅಸ್ತಮಿಸಿದ ಕೂಡಲೇ ಸುಮಕ್ಕ ರಾಜಧಾನಿಗೆ ಹೋಗದಾದರು. ಫ್ರೆಡ್ಡಿಯ ನೀಲಿಕಾರು, ಅಸಹ್ಯವಾದ ಸುಗಂಧಗಳೆಲ್ಲವೂ ಹಳ್ಳಿಯ ಹಾದಿಯಿಂದ ದೂರವಾದವು.

ಸುಮಕ್ಕ ಅಳುತ್ತಾ 'ಅದಾ ಉಂಡೆನು ಕದಾ ತೆಗಿ' ಎಂಬಂತೆ ಅಂಕಲ್‌ನ ಹೃದಯದಲ್ಲಿ ಪುನಃ ಆಶ್ರಯ ಪಡೆದರು. ಇನ್ನು ಮುಂದೆ ತಾನು ರಾಜಕೀಯಕ್ಕೆ ಬರುವುದಿಲ್ಲವೆಂದು ನಿರ್ಧರಿಸಿ ಶೇಕಡಾ ನೂರರಷ್ಟು ಗೃಹಿಣಿಯಾಗಿ ಬದಲಾದರು.

ಶ್ರೀದೇವಿ, ನನಗೆ ಅದೇ ಆತಂಕವಾಗಿತ್ತು. ಬದಲಾವಣೆಯಾಗಿದ್ದು ಶ್ರೀದೇವಿಯಲ್ಲಂತೆ. ಒಂದು ವರ್ಷ ಅವಳು ಮನೆಯಿಂದ ಹೊರಬರಲೇ ಇಲ್ಲ. ಔಟ್‌ಹೌಸಿನಲ್ಲಿಯೇ ಉಳಿದುಕೊಂಡಳು. ದೂರದ ದೊಡ್ಡಮ್ಮ ಒಬ್ಬರು ಅವಳ ಕಷ್ಟಗಳನ್ನು ಕೇಳಿ ತಿಳಿದು ಅವಳ ಜೊತೆ ಇರಲು ಬಂದಳಂತೆ. ಒಂದು ವರ್ಷ ಕಳೆದರೂ ಗಂಡ ಹಿಂತಿರುಗಲಿಲ್ಲವೆಂದು ಅವಳು ನಿಧಾನವಾಗಿ ಪರದೆ ಸರಿಸಿ ಹೊರಬಂದಳು.

ಮೊದಲು ಆದಿವಾಸಿ ಮಕ್ಕಳಿಗೆ ಶಿಕ್ಷಣ ನೀಡುವ ಕಾರ್ಯಕ್ರಮದ ಭಾಗವಾದಳು. ಆನಂತರ ಆದಿವಾಸಿ ಹೆಣ್ಮಕ್ಕಳಿಗೆ ಪಾತಿವ್ರತ್ಯದ ಕುರಿತು ತಿಳಿಯಹೇಳಿದಳು. ಅವರೆಲ್ಲಾ ಶ್ರೀದೇವಿಯನ್ನು 'ಅಮ್ಮಾ' ಎಂದೇ ಕರೆದರು. ಕಪ್ಪು ಅಂಚಿನ ಬಿಳಿಯ ಖಾದಿ ಸೀರೆ ಬ್ಲೌಸ್ ತೊಟ್ಟ ಸುಂದರಿ ಶ್ರೀದೇವಿಗೆ ಅಭಿಮಾನಿಗಳು ಹೆಚ್ಚಾದರು. ಬೆಳಿಗ್ಗೆ ಮನೆಯಿಂದ ಹೊರಡುವ ಮೊದಲೇ ಬಹಳಷ್ಟು ಮಂದಿ ಅವಳನ್ನು ಭೇಟಿಯಾಗಲು ಬರುತ್ತಿದ್ದರು. ಹಳೆಯದೊಂದು ಫಿಯೆಟ್ ಕಾರಿನಲ್ಲಿ ತಾನೇ ಡ್ರೈವ್ ಮಾಡಿ ಎಲ್ಲರನ್ನು ಭೇಟಿ ಮಾಡಿ ಸಮಸ್ಯೆಗಳನ್ನು ಆಲಿಸುತ್ತಿದ್ದರು. ಮದ್ಯಪಾನದ ವಿರುದ್ಧ ಪಾದಯಾತ್ರೆ ಮಾಡಿ ಹಳ್ಳಿಯ ಆಚೆಗೂ ತನ್ನ ಸಾಮ್ರಾಜ್ಯವನ್ನು ವಿಸ್ತರಿಸಿದಳು.

ಮದುವೆ?

ಹಲವಾರು ಆಲೋಚನೆಗಳು ಬಂದವು. ಅಂಕಲ್ ಅವಳನ್ನು ಸಾಕಷ್ಟು ಬಲವಂತಪಡಿಸಿದ್ದರು ಕೂಡ. ಜೀವನದಲ್ಲಿ ಮದುವೆ ಒಮ್ಮೆ ಮಾತ್ರವೆಂಬುದು ಅವಳ ದೃಢವಾದ ನಿರ್ಧಾರ. ತನ್ನ ಗಂಡನನ್ನು ಯಾರೋ ಅಪಾಯಕ್ಕೆ ತಳ್ಳಿದ್ದಾರೆಂಬುದನ್ನು ಅವಳು ಮೊದಲು ತಿಳಿದುಕೊಂಡಿದ್ದಳು. ಆದರೆ ಸ್ವಲ್ಪ ಕಾಲದ ನಂತರ ಅವಳ ನಂಬಿಕೆ ಹುಸಿಯೆನಿಸಿತು. ಅಪ್ಪ ಅಮ್ಮ ಎಷ್ಟೇ ಬಲವಂತಪಡಿಸಿದರೂ ಅವಳು ತನ್ನ ನೆತ್ತಿಯ ಮೇಲಿನ ಸಿಂಧೂರವನ್ನು ಅಳಿಸಲಿಲ್ಲ.

ಬಾರ್‌ನಿಂದ ಕೋಣೆಗೆ ಬಂದು ನಾನು ಶ್ರೀದೇವಿಯನ್ನು ನೆನೆದು ಬಿಕ್ಕಿಬಿಕ್ಕಿ ಅತ್ತೆ. ಮಧ್ಯರಾತ್ರಿಯಲ್ಲೆಲ್ಲ 'ದೇವಿ' ಎಂದು ನಾನು ಬಾಗಿಲು ತಟ್ಟಿ ಕರೆಯುತ್ತೇನೆಂದು ಅವಳು ನಿದ್ರೆಗೆಟ್ಟು ಕಾದಿದ್ದಳು. ಎಷ್ಟೇ ವರ್ಷಗಳಾದರೂ ಒಂದು ದಿನ ತಾನು ತಿರುಗಿ ಹೋಗುತ್ತೇನೆಂದು ಅವಳು ನಂಬಿದ್ದಾಳೆ.

ಅಂದು ನಿದ್ರಿಸದ ಒಂದು ರಾತ್ರಿ. ಹತ್ತಿರವಾದಾಗ ತುಂಬಾ ಹತ್ತಿರವಾಗುವುದು, ಅಗಲುವಾಗ ತಂಬಾ ದೂರವಾಗುವುದು ನನ್ನ ಶೈಲಿ. ನನ್ನ ಸ್ವಂತ ಕುಟುಂಬವನ್ನು, ಮಾವನ ಕುಟುಂಬವನ್ನು ಎಷ್ಟೊಂದು ಪ್ರೀತಿಸುತ್ತಿದ್ದೆ. ಇಷ್ಟಾದರೂ ನಾನು ಅವರನ್ನು ಬಿಟ್ಟು ಹೋಗಲು ಹಿಂಜರಿಯಲಿಲ್ಲ. ಶ್ರೀದೇವಿಯನ್ನು ನಾನು ನನ್ನ ಹೃದಯದೊಳಗಿಟ್ಟು ಪೂಜಿಸಿದ್ದೆ. ದೂರವಾದ ನಂತರ ಅನ್ವೇಷಿಸಬೇಕೆಂದೆನಿಸಿದ್ದು ಈಗ.

ಡಿ.ವೈ.ಎಸ್.ಪಿ. ಇತ್ತೀಚೆಗೆ ಭೇಟಿಯಾಗಿದ್ದು ಎಂಟು ತಿಂಗಳ ಮೊದಲು. ಒಬ್ಬ ಗಲ್ಫ್ ಪ್ರಯಾಣಿಗ ಉಡುಗೊರೆಯಾಗಿ ಕೊಟ್ಟ ಶಿವಾಗ್ ರೀಗಲ್‌ನೊಂದಿಗೆ ನೇರವಾಗಿ ಅಂಕ್‌ನನ್ನು ಭೇಟಿಯಾಗಲು ಹೋದ. ಅಂಕಲ್ ಕುಡಿದರು... ಕಂಠಪೂರ್ತಿ ಕುಡಿದು ಅಮಲೇರಿಸಿಕೊಂಡರು. ಅನಂತರ ಅವರು ಮಾತನಾಡಿದ್ದು ತಮ್ಮ ಮಕ್ಕಳ ಕರುಣಾಜನಕ ಕತೆಗಳನ್ನು. ಶ್ರೀದೇವಿಗೆ ಸೂಕ್ತವಾದ ಗಂಡನ್ನು ಹುಡುಕಲು ಡಿ.ವೈ.ಎಸ್.ಪಿ.ಗೆ ವಹಿಸಿದ್ದರು.

'ನಿನ್ನ ಫಿಗರಿಗೆ ಸೂಟ್ ಆಗುತ್ತದೆ' ಡಿ.ವೈ.ಎಸ್.ಪಿ. ಕಳ್ಳನಗು ಬೀರುತ್ತಾ ಹೇಳಿದ, 'ಗತಿಯಿಲ್ಲದ ಗಲ್ಫ್‌ನವನು ಎಂಬುದಷ್ಟೆ ನಿನ್ನ ಸಮಸ್ಯೆ'.

ಇನ್ನು ನಾನು ಹೇಗೆ ಶ್ರೀದೇವಿಯ ಮುಖ ನೋಡುವುದು? ಅವಳು ನನ್ನನ್ನು ಜೀವಂತವಾಗಿ ಕಂಡಾಗ ಹೇಗಿರುತ್ತದೆ ಅವಳ ಪ್ರತಿಕ್ರಿಯೆ? ನನ್ನ ಚಿತ್ರವನ್ನು ಮತ್ತು ಭೂತಕಾಲವನ್ನಷ್ಟೇ ಅವಳು ಜ್ಞಾಪಿಸಿಕೊಳ್ಳುತ್ತಿರುವುದು?

ಒಂದು ವಾರ ಯಾವುದೇ ತೀರ್ಮಾನ ತೆಗೆದುಕೊಳ್ಳಲು ಸಾಧ್ಯವಾಗದೆ ನಾನು ಚಡಪಡಿಸಿದೆ. ನಗರದ ಬಹುತೇಕ ಎಲ್ಲಾ ದೇವಸ್ಥಾನಗಳ ಮೆಟ್ಟಿಲುಗಳನ್ನು ಹತ್ತಿ ಇಳಿದೆ. ಕನ್ಯಾಕುಮಾರಿಗೆ ಹೋಗಿ ಮೂರು ಸಮುದ್ರ ಸೇರುವ ಬಿಂದುವಿನಲ್ಲಿ ಮೂರು ಸಲ ಮುಳುಗು ಹಾಕಿದೆ. ಕಣ್ಣಿನಿಂದ ಹರಿದ ನೀರನ್ನು ಕಡಲುಗಳಿಗೆ ಅರ್ಪಿಸಿದೆ. ಪುಟ್ಟಪುಟ್ಟ ಅಲೆಗಳು ಬಂದು ಮರಳಿನಿಂದ ನನ್ನ ಕೊಳೆಯನ್ನು ತುಂಬಾ ಹೊತ್ತು ಉಜ್ಜಿ ಸ್ವಚ್ಛಗೊಳಿಸಿದವು. ನೊರೆನೊರೆಯಾಗಿ ಬಂದ ಅಲೆಗಳು ನನ್ನ ಕೊಳೆಯನ್ನು ಸಮುದ್ರಾದಳಕ್ಕೆ ಒಯ್ದವು. ಸೂರ್ಯನನ್ನು ನೋಡುತ್ತಾ ನಿಂತು ನನ್ನ ಪಾಪಗಳನ್ನೆಲ್ಲಾ ಅದಕ್ಕೆ ಅರ್ಪಿಸಿದೆ. ತ್ರಿವೇಣಿಯಲ್ಲಿ ಮುಳುಗುವ ಸೂರ್ಯಕುಂಭದೊಂದಿಗೆ ನನ್ನ ಪಾಪವು ಕಡಳಿನಾಳಕ್ಕೆ ಇಳಿದವು.

## ಅಧ್ಯಾಯ–13

ಚಿರಪರಿಚಿತವಾಗಿದ್ದ ರಸ್ತೆಯ ಎರಡೂ ಬದಿಗಳಲ್ಲಿ ಹೊಸ ಹೊಸ ದೃಶ್ಯಗಳಿದ್ದವು. ಆದರೂ ಟ್ಯಾಕ್ಸಿ ಡ್ರೈವರ್‌ಗೆ ಸರಿಯಾದ ದಾರಿಯನ್ನೇ ತೋರಿಸಿದೆ. ಗಲ್ಫ್‌ನಿಂದ ಹಿಂತಿರುಗಿದವರು ಮಾಡುವಂತೆ ನಾನು ಕೂಡ ಸುಂಕವಿಲ್ಲದ ಅಂಗಡಿಗಳಿಗೆ ಹೋಗಿ ಲೊಟ್ಟು ಲೊಡಕು ವಸ್ತುಗಳನ್ನು ಕೊಂಡು ಒಂದು ಪೆಟ್ಟಿಗೆಯಲ್ಲಿ ತುಂಬಿ ಟ್ಯಾಕ್ಸಿಯ ಮೇಲೆ ಕಟ್ಟಿಟ್ಟೆ. ಅದು ಡಿಕ್ಕಿಯಿಲ್ಲದ ಸಣ್ಣ ಗಾತ್ರದ ಟ್ಯಾಕ್ಸಿಯಾಗಿತ್ತು. ಅಂಕಲ್‌ಗೆ ಒಂದು ಸ್ಕಾಚ್ ಬಾಟಲಿ, ಸುಮಕ್ಕನಿಗೆ ಒಂದು ಸೀರೆ ಹಾಗೂ ಶ್ರೀದೇವಿಗೆ ಹೊಸ ಡಿಸೈನ್ನಿನ ನಾಲ್ಕು ಸೀರೆಗಳನ್ನು ಕೊಂಡುಕೊಂಡಿದ್ದೆ. ಊರು ತಲುಪಿದ ನಂತರ ಅವಳ ಖಾದಿ ಸೀರೆ ಮತ್ತು ಸರ್ವೋದಯದ ಪೋಷಾಕುಗಳನ್ನೆಲ್ಲಾ ಬಲಾಯಿಸಬೇಕು. ನಾನು ಸಿಕ್ಕಿದ ಮೇಲೆ ಅವಳಿಗೇನಿದೆ ಸಾಮಾಜಿಕ ಬದ್ಧತೆ? ಹಿಂದೆ ನನ್ನನ್ನು ರಾಜಕೀಯದಿಂದ ಹಿಮ್ಮೆಟ್ಟಿಸಲು ಅವಳು ತುಂಬಾ ಪರಿಪಾಟಲು ಪಟ್ಟಿದ್ದಳು.

ಈ ಕೊಳ್ಳುವ ಕಾರ್ಯಕ್ರಮದಿಂದ ಪ್ರಯಾಣ ಕೊಂಚ ತಡವಾಯಿತು. ಆದ್ದರಿಂದ ಗಮ್ಯ ತಲುಪುವ ಮೊದಲೇ ಸಂಜೆ ಆವರಿಸಿತ್ತು. ಸ್ಥಳ ಗುರುತಿಸಲು ಕೊಂಚ ಪರದಾಡಬೇಕಾಯಿತು. ಹೊಸ ಹೊಸ ಕಟ್ಟಡಗಳು ನಿಧಾನವಾಗಿ ಮರೆಯಾಗತೊಡಗಿದಂತೆ ಹಳೆಯ ದಾರಿ ಪತ್ತೆಯಾಯಿತು.